ಪಿ.ಡಬ್ಲ್ಯು 1

(ದಿನಾಂಕ 12-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಫಿರ್ಯಾದಿಯ ಪ್ರಮಾಣೀಕೃತ ಹೇಳಿಕೆ**

ನಾನು ಈ ಪ್ರಕರಣದಲ್ಲಿ ಫಿರ್ಯಾದಿದಾರನಾಗಿದ್ದು, ನನ್ನ ಪ್ರಮಾಣೀಕೃತ ಹೇಳಿಕೆಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ನಾನು ನನ್ನ ಫಿರ್ಯಾದಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ.

ಫಿರ್ಯಾದಿ ಸಂಸ್ಥೆಯವರು ಪ್ರಕರಣವನ್ನು ನಡೆಸಲು ನೀಡಿರುವ ಅಧಿಕಾರ ಪತ್ರದ ಪ್ರತಿಯನ್ನು ನಿಪಿ 1 ಎಂದು, ಆರೋಪಿಯು ನೀಡಿರುವ ಚೆಕ್‌ನ್ನು ನಿ.ಪಿ.2 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿ.ಪಿ.2(ಎ) ಎಂದು, ಬ್ಯಾಂಕನವರು ನೀಡಿರುವ ಹಿಂಬರಹವನ್ನು ನಿ.ಪಿ.3 ಎಂದು, ದಿನಾಂಕ 20-09-2025ರಂದು ಆರೋಪಿಗೆ ನೀಡಿರುವ ನೋಟಿಸ್‌ನ ಕಚೇರಿ ಪ್ರತಿಯನ್ನು ನಿ.ಪಿ.4 ಎಂದು, ಆರೋಪಿಗೆ ನೋಟಿಸ್ ನೀಡಿದ ಬಗ್ಗೆ ಅಂಚೆ ರಶೀದಿಯನ್ನು ನಿ.ಪಿ.5 ಎಂದು, ಆರೋಪಿಗೆ ನೋಟಿಸ್ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ನಿ.ಪಿ.6 ಎಂದು, ಆರೋಪಿಯ ಸಹಿಯನ್ನು ನಿ.ಪಿ.6ಎ ಎಂದು, ಆರೋಪಿಗೆ ನೋಟಿಸ್ ಜಾರಿಯಾದ ಬಗ್ಗೆ Track Consignmentನ ಪ್ರತಿಯನ್ನು ನಿ.ಪಿ.7 ಎಂದು, ಸಾಲದ ಅರ್ಜಿಯ ಯಥಾ ನಕಲನ್ನು ನಿ.ಪಿ.8 ಎಂದು, ಸಾಲದ ಕರಾರಿನ ಯಥಾ ನಕಲನ್ನು ನಿ.ಪಿ.9 ಎಂದು, ಡಿಮಾಂಡ ಪ್ರಾಮಿಸರಿ ನೋಟನ ಯಥಾ ನಕಲನ್ನು ನಿ.ಪಿ.10 ಎಂದು, ಆರೋಪಿ ಹಣ ಪಾವತಿಯಾದ ಬಗ್ಗೆ ಪಾವತಿ ರಶೀದಿಯ ಯಥಾ ನಕಲನ್ನು ನಿಪಿ-11 ಎಂದು, ಸಾಲದ ಖಾತೆಯ ಉತಾರಿನ ಪ್ರತಿಯನ್ನು ನಿ.ಪಿ.12 ಎಂದು, ಪಿರ್ಯಾದಿ ಬ್ಯಾಂಕಿನವರು ನೀಡಿದ ಸರ್ಟಿಫಿಕೇಟನ್ನು ನಿಪಿ-13 ಎಂದು , ಫಿರ್ಯಾದನ್ನು ನಿ.ಪಿ.14 ಎಂದು, ಫಿರ್ಯಾದಿಯಲ್ಲಿರುವ ಫಿರ್ಯಾದಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು.

ನನ್ನ ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ಫಿರ್ಯಾದಿಯಲ್ಲಿ ಕೇಳಿರುವಂತೆ ಆದೇಶವಾಗಲು ಪ್ರಾರ್ಥನೆ.

(ನಿ.ಪಿ.8 ರಿಂದ 11 ರ ಯಥಾ ನಕಲುಗಳನ್ನು ಮೂಲ ದಾಖಲಾತಿಯೊಂದಿಗೆ ತಾಳೆ ಮಾಡಿ ಪರಿಶೀಲಿಸಿದ ನಂತರದಲ್ಲಿ ಮೂಲ ದಾಖಲಾತಿಗಳನ್ನು ಫಿರ್ಯಾದುದಾರರಿಗೆ ಹಿಂದಿರುಗಿಸಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಜೆ. ಎಂ. ಎಫ್. ಸಿ. ಕುಮಟಾ